ಅಮಲ್ಜಾರಿ ಸಂಖ್ಯೆಃ **- 02/2022**

ಡಿ.ಡಬ್ಲ್ಯೂ **:-1-**ಧನಂಜಯ

ದಿನಾಂಕಃ **07-08-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಡಿಕ್ರಿದಾರರ ಪರ ವಕೀಲರಾದ ಶ್ರೀ.ಹೆಚ್ ಜಿ ಎಸ್ ವಕೀಲರಿಂದ:-**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಜಮೀನಿನ ಸರ್ವೆ ನಂ.7/2 ಅಂತ ಇರುತ್ತದೆ. ಡಿಕ್ರಿದಾರರ ಜಮೀನಿನ ಸರ್ವೆ ನಂ.9 ಅಂತ ಇರುತ್ತದೆ. ನಮ್ಮ ಜಮೀನು ಮತ್ತು ಅವರ ಜಮೀನು ಒಂದಕ್ಕೊಂದು ಹೊಂದಿಕೊಂಡಿವೆ ಎಂದರೆ ಸರಿ. ನನ್ನ ಜಮೀನಿನಲ್ಲಿ ಯಾವುದೇ ಕರಾಬು ಕ್ಷೇತ್ರವು ಇರುವುದಿಲ್ಲ. ಆದರೆ ಡಿಕ್ರಿದಾರರ ಜಮೀನಿನಲ್ಲಿ 3 ಗುಂಟೆ ಕ್ಷೇತ್ರವು ಕರಾಬು ಇರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ.

2. ಡಿಕ್ರಿದಾರರ ಜಮೀನಿನ ಸ್ವಾಧೀನಾನುಭವಕ್ಕೆ ನಾವು ಅಡ್ಡಿ ಆತಂಕ ಪಡಿಸಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣ ಆತನು ಸಲ್ಲಿಸಿದ ಅಸಲು ದಾವಾ ನಂ.189/2013 ರಲ್ಲಿ ಆತನ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಆ ರೀತಿ ಡಿಕ್ರಿಯಾದ ನಂತರವೂ ಸಹ ನಾನು ಡಿಕ್ರಿದಾರರ ಜಮೀನಿನ ವಹಿವಾಟಗೆ ಅಡ್ಡಿಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿದಾರರ ಜಮೀನಿನ ವಿಸ್ತೀರ್ಣವು ಎಷ್ಟು ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಆ ರೀತಿ ವಹಿವಾಟಿಗೆ ತೊಂದರೆ ಮಾಡಿದ್ದರಿಂದ ಡಿಕ್ರಿದಾರರು ನನ್ನ ವಿರುದ್ಧ ಹಲವಾರು ಬಾರಿ ಪೊಲೀಸರಿಗೆ ದೂರು ನೀಡಿದ್ದಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿಯು ಮುಂದುವರೆದು ನಾನು ಎಂದಿಗೂ ಡಿಕ್ರಿದಾರರ ಜಮೀನಿನ ವಹಿವಾಟಿಗೆ ತೊಂದರೆ ಮಾಡಿಲ್ಲ ಎಂದು ನುಡಿಯುತ್ತಾರೆ.

3. ನನ್ನ ಜಮೀನಿನಲ್ಲಿ ಯಾವುದೇ ಕರಾಬು ಇಲ್ಲದೇ ಇದ್ದರೂ ಸಹ ಡಿಕ್ರಿದಾರರ ಜಮೀನಿಗೆ ಅಡ್ಡಿಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ತೀರ್ಪುಋಣಿ ನಂ.1 ರವರ ಜಮೀನಿನಲ್ಲಿ 3 ಗುಂಟೆ ಕರಾಬು ಇರುವುದಾಗಿ ನುಡಿಯುತ್ತಾರೆ. ಆತನ ಜಮೀನಿನಲ್ಲಿಯೂ ಸಹ ಯಾವುದೇ ಕರಾಬು ಇಲ್ಲದೇ ಇದ್ದರೂ ಸಹ ನಾವು ಸುಳ್ಳು ಆಧರಿಸುತ್ತಿದ್ದೇವೆ ಎಂದರೆ ಸರಿಯಲ್ಲ.

4. ಡಿಕ್ರಿದಾರ ಮತ್ತು ತೀರ್ಪುಋಣಿ ನಂ.1 ರವರ ಜಮೀನಿನಲ್ಲಿ ವಿದ್ಯುತ್ ಕಂಬಗಳು ಇರುತ್ತವೆ. ಆ ರೀತಿ ವಿದ್ಯುತ್ ಕಂಬಗಳು ಪೂರ್ಣವಾಗಿ ಡಿಕ್ರಿದಾರರ ಜಮೀನಿನಲ್ಲಿಯೇ ಇದ್ದರೂ ಸಹ ನಾನು ತೀರ್ಪುಋಣಿ ನಂ.1 ರವರ ಜಮೀನಿನಲ್ಲಿ ವಿದ್ಯುತ್ ಕಂಬ ಇರುತ್ತದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನನ್ನು ಅಳತೆ ಮಾಡಿಸುವಾಗ ಡಿಕ್ರಿದಾರರು ಅಡ್ಡಿಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.